ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಅಧ್ಯಕ್ಷರೆ, ಪೂರ್ಣ ಮಾಹಿತಿಯನ್ನು ಕೊಟ್ಟಿದ್ದೇವೆ. 237 ಕೆರೆಗಳ ನಿರ್ಮಾಣಕ್ಕೆ 7779.34 ಎಕರೆ ತೆಗೆದುಕೊಂಡಿದ್ದೇವೆಂದು ಹೇಳಿದ್ದೇವೆ. 68,60,61,000 ರೂಪಾಯಿಗಳಷ್ಟು ಪರಿಹಾರವನ್ನು ಕೊಟ್ಟಿದ್ದೇವೆ. ತಾವು ಕೇಳುವಂತದ್ದು ಕಟ್ಟಡ ಯಾವುದಾದರೂ ಮುಳುಗಿದ್ದರೆ ಎಂದು. ಅಂತವರದ್ದು ನನ್ನ ಗಮನಕ್ಕೆ ತಂದರೆ ನಿರ್ದಿಷ್ಟ ಪ್ರಕರಣವೇನಾದರೂ ಇದ್ದರೆ ಖಂಡಿತ ಮಾಡುತ್ತೇನೆ.

ಅಧ್ಯಕ್ಷರು: ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಮಂಡಿಸುವುದು ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಸ್. ಸುರೇಶ್ ಕುಮಾರ್ (ಮಾನ್ಯ ಕಾನೂನು ಮತ್ತು ನಗರಾಭಿವೃದ್ಧಿ ಸಚಿವರು):- ದಿನಾಂಕ 12-12-2011ರ 5ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 96 ಪ್ರಶ್ನೆಗಳ ಪೈಕಿ 87 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಗಿದೆ (ಅನುಬಂಧ-1)

3. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು:

ಅಧ್ಯಕ್ಷರು: ಈಗ ಶೂನ್ಯವೇಳೆ, ಶ್ರೀ ಶಂಕರಲಿಂಗೇಗೌಡರು ಹಾಗೂ ಶ್ರೀ ರೇವಣ್ಣನವರು ಇಬ್ಬರದೂ ಒಂದೇ ಪ್ರಶ್ನೆ.

ಅ) ವಿಷಯ: ಮೈಸೂರು ಜಿಲ್ಲೆಯಲ್ಲಿ ನಡೆಯುತ್ತಿರುವ ಮರಳಿನ ಮಾರಣಹೋಮ ಹಾಗೂ ಕಾರ್ಮಿಕರ ಸಮಸ್ಯೆ ಬಗ್ಗೆ.

ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ: ಸಭಾಧ್ಯಕ್ಷರೇ, ನಾನು . . .

ಶ್ರೀ ಹೆಚ್. ಡಿ. ರೇವಣ್ಣ: ಅಧ್ಯಕ್ಷರೇ, ನಾವು ಒಂದು ಮನವಿಯನ್ನು ತಂದಿದ್ದೇವೆ. ದಯಮಾಡಿ ಆಮೇಲೆ ಅವಕಾಶ ಮಾಡಕೊಡಿ.

ಅಧ್ಯಕ್ಷರು: ಆಯಿತು

ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ: ಮಾನ್ಯ ಅಧ್ಯಕ್ಷರೇ, ನಮ್ಮ ಮೈಸೂರು ಜಿಲ್ಲೆಯಲ್ಲಿ ಮರಳಿಗೆ ಮಾರಣಹೋಮವಾಗುತ್ತಿದೆ. ನಮ್ಮನ್ನು ಮೂರು ಸರ್ಕಾರ ಸೇರಿ JCB ಎಂದು ಕರೆಯುತ್ತಾರೆ. JCB ಎಂದರೆ ಏನಪ್ಪಾ ಎಂದರೆ, J ಎಂದರೆ ಜನತಾದಳ, C ಎಂದರೆ ಕಾಂಗ್ರೆಸ್, B ಎಂದರೆ ಬಿಜೆಪಿ ಇವೆಲ್ಲವನ್ನೂ ಸೇರಿಸುತ್ತಿದ್ದೇವೆ ಎಂದು ಬಯ್ದರು. ಇವತ್ತು ಕೂಲಿ ಕಾರ್ಮಿಕರ ಮೇಲೆ ತಣ್ಣೀರು ಬಟ್ಟೆ ಹಾಕುವಂತ ಕೆಲಸವಾಗುತ್ತಿದೆ. ಮೂರು ತಿಂಗಳುಗಳಿಗೂ ಹೆಚ್ಚು ಕಾಲ ಮರಳು ಸರಬರಾಜು ಅಗುತ್ತಿಲ್ಲ. ಜೊತೆಗೆ ಲಾರಿ